Member's Representation.

Sri C. M. ARUMUGHAM (Kolar Gold Fields).—Sir, the other day you were kind enough to say that the members of the Legislative Assembly must give top priority to the business of this House and that they must attend the session. May I bring to your notice, Sir, that when the session is going on and when we are spending about Rs. 30 per minute, the Ministers attend opening ceremonies and such other functions; I would like to know whether it is in order for them to do so. When you have given us the order not to attend such functions during the session, you must give such order to the Ministers also.

Mr. SPEAKER.—This is not the first time that this question has been raised. It was raised a few days ago and I then stated that normally a Minister should be present and he should be necessarily present when his subject is being discussed. But there are occasions when the Ministers go out to lay the foundation stone of some dam or to open some institute. That way we have no control over them. We have laid down the general rule which I have mentioned. I cannot prevent the Ministers from going out and attending to other duties outside the House.

Sri G. VENKATAI GOWDA (Palaiyam).—Some members also would have liked to go and attend them but for the business of the House. Why should they not be allowed to go? If it is inevitable, the House can be adjourned.

Mr. SPEAKER.—That cannot be done.

FOOD SITUATION IN THE STATE.

(Debate continued.)

*ಶ್ರೀ ಬಿ. ಎಸ್. ಶಂಕರಪ್ಪ (ಹೊನ್ನಾಳಿ).—ಮಾನ್ಯ ಅಧ್ಯಕ್ಷರೆ, ಅಶಕ್ತತೆಯಿಂದ ಕೂಳಿತು ಮಾತನಾಡಲು ಅವಕಾಶ ಕೊಟ್ಟಿರುವುದಕ್ಕಾಗಿ ಹೃತ್ಪೂರ್ವಕವಾಗಿ ವಂದನೆಗಳನ್ನು ತಮಗೆ ನಲ್ಲಿಸುತ್ತೇನೆ. ಇಂದು ದೇಶದ ಆಹಾರ ಪರಿಸ್ಥಿತಿ ವಿಷಯದಲ್ಲಿ ಒಂದೆರಡು ಮಾತುಗಳನ್ನಾಡಬೇಕೆಂದು ನಾನು ಇಚ್ಛಿಸುತ್ತೇನೆ. ಇವೊತ್ತು ದೇಶದಲ್ಲಿ ಆಹಾರದ ಅಭಾವವೆಂಬುದು ಬಹಳ ಉಗ್ರವಾಗುವುದಕ್ಕೇನು ಕಾರಣ, ಇದೇನು ವಿಚಿತ್ರ, ಹೇಗಾಯಿತು, ಏನು ಎಂಬುದನ್ನು ಕೂಲಂಕಷವಾಗಿ ಪರಿಶೀಲನೆಮಾಡದೆ ಟೀಕೆ ಮಾಡಿದರೆ ಆಹಾರ ಬರುವುದಿಲ್ಲ. ನನಗಿರುವ ಅಲ್ಪ ಅನುಭವದ ಬಗ್ಗೆ ಒಂದೆರಡು ಮಾತುಗಳನ್ನು ಕೇಳುತ್ತೇನೆ. ಒಂದನೆಯದು ದೇಶದ ಆಹಾರದ ಅಭಾವಕ್ಕೆ ರೈತನ ಸ್ಥಿತಿ, ಎರಡನೆಯದು ದೈವಿಕವಾದ ಸಂಪತ್ತು, ಮೂರನೆಯದು ಸರ್ಕಾರದ ಜವಾಬ್ದಾರಿ—ಈ ಮೂರು ಕಾರಣಗಳಿಂದ ಆಹಾರ ಹೆಚ್ಚುವುದು ಮತ್ತು ಕಡಮೆಯಾಗುವುದು ಆಗುತ್ತಿದೆ ಎಂದು ನನ್ನ ಒಂದು ಅಲ್ಪ ಅನುಭವಕ್ಕೆ ಬಂದಿದೆ.

ಒಂದನೆಯದಾಗಿ ರೈತನ ಸ್ಥಿತಿಯೇನು, ಹೇಗೆ ಎಂದು ಯೋಚನೆ ಮಾಡಿದರೆ ನಮ್ಮ ದೇಶದ ರೈತ ಬಹಳ ಬಡವ. ಅವನಿಗೆ ತಿನ್ನುವುದಕ್ಕೆ ಅನ್ನ, ಉಡುವುದಕ್ಕೆ ಬಟ್ಟೆ ಸಾಲದು. ಅವನಿಗೆ ಬೇಸಾಯ ಮಾಡಲು ಶಕ್ತಿಯಿಲ್ಲ, ಸುಗ್ಗಿ ಸ್ಥಿರವಾಗಿ ಆಗದೆ ಹೋದರೆ ಇರುವುದನ್ನು ಮಾರಿ ಹಣ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ, ಮಾರಿದ ದವಸಕ್ಕೆ ಸರಿಯಾದ ಬೆಲೆ ಸಿಕ್ಕುತ್ತಿಲ್ಲ. ಇದಕ್ಕೆ ಅವನ ನಿರಕ್ಷರತೆ, ಅವಿದ್ಯೆ ಕಾರಣ. ಇವನ್ನು ತಿಳಿದು ಅವನಿಗೆ ಸರಿಯಾದ ಅನುಕೂಲವಾಗುವ ಹಾಗೆ ಮಾಡಬೇಕು.

ಎರಡನೆಯದಾಗಿ ರೈತನ ಪರಿಸ್ಥಿತಿ ಏನಾಗಿದೆ ಯೆಂದು ನೋಡಿ ಬೆಳೆದವನ ಕಷ್ಟವೇನೆಂಬುದನ್ನು ಸರ್ಕಾರದವರು ಪರಿಶೀಲಿಸಿ ಪರಿಹಾರ ಮಾಡಿಯೇ ತೀರಬೇಕು. ಹೇಗೆಂದರೆ ಈ ದಿವಸ ಹೆಚ್ಚು ಆಹಾರ ಬೆಳೆಯಬೇಕೆಂದು ಉತ್ಸಾಹದಿಂದಿರುವವರಿಗೆ ಅಮೃತ ಮಹಲ್ ಕಾವಲು, ಬಂಜರು ಭೂಮಿ ಹರಾಜು ಹಾಕಿ ಕಮ್ಮತ್ತಿಗೆ ಕೊಡಬೇಕು. ಆದರೆ ದನಗಳು ಮೇಯುವುದಕ್ಕೆ ಸಾಕಷ್ಟು ಜಮೀನಿಲ್ಲದಂತೆ ಮಾಡಬಾರದು. ಕೆಲವು ಕಡೆ ಅಡಕೆ, ತೆಂಗು ಮುಂತಾದ ಕಮರ್ಷಿಯಲ್ ಕಾಪ್ಸ್ ಬೆಳೆಯುತ್ತಾರೆ. ಖುಷ್ಕಿ ಜಮೀನಿನಲ್ಲಿ ಬೆಳೆಯುವುದು ಮೂರು ತಿಂಗಳಿಗೆ ಸಾಲುವುದಿಲ್ಲ.

[MR. DEPUTY SPEAKER in the Chair]

ಇನ್ನು ಎರಡನೆಯದಾಗಿ ರೈತನಿಗೆ ಇರತಕ್ಕ ಸಾಲದ ವಿಚಾರ. "ಕಡಹುಟ್ಟಿ ಬಡವ ಕೆಟ್ಟ" ಎಂದು ಒಂದು ಗಾದೆಯ ಮಾತು ಇದೆ. ರೈತನು ಮೊದಲು ಸಾಲಮಾಡುತ್ತಾನೆ. ಆಮೇಲೆ ಅದಕ್ಕೆ ಹೆಚ್ಚು ಹೆಚ್ಚು ಬಡ್ಡಿ ಕೊಡಬೇಕಾಗುತ್ತದೆ. ಬಡವನು ಬಹಳ ಕಷ್ಟಕ್ಕೆ ಈಡಾಗುತ್ತಾನೆ. ರೈತನ ಸಾಲ ಹೇಗೆ ಪರಿಹಾರ ಮಾಡಬೇಕು, ಅದಕ್ಕೆ ಇರತಕ್ಕ ಅಡ್ಡಿ ಆತಂಕಗಳೇನು ಎಂಬುದನ್ನು ಪರಿಶೀಲನೆ ಮಾಡಿಲ್ಲ. ಜಮೀನು ಅಡಮಾನ ಬ್ಯಾಂಕಿನಿಂದ ಸಾಲ ದೊರೆಯಲು ಐದಾರು ತಿಂಗಳು ಹಿಡಿಯುತ್ತದೆ. ಹಳ್ಳಿಗಳಲ್ಲಿ ರೈತನಿಗೆ ಬೇರೆ ಕಡೆ ಸಾಲ ದೊರೆಯುವುದಿಲ್ಲ. ರೈತನಿಗೆ ತಗಾವಿ ಸಾಲ ಸಹ ಸಿಕ್ಕುವುದು ಬಹಳ ಕಷ್ಟವಾಗಿದೆ. ಈ ವಿಚಾರದಲ್ಲಿ ಕಾನೂನನ್ನು ಸ್ವಲ್ಪ ನಡಿಲ ಮಾಡಿ ರೈತನಿಗೆ ಸಾಲ ಸಿಕ್ಕುವ ಹಾಗೆ ಸಹಾಯ ಮಾಡಬೇಕು. ಇನ್ನು ರೈತನು ಬೆಳೆದಂಥ ಬೆಳೆಯನ್ನು ಯೋಗ್ಯ ಬೆಲೆಗೆ ಮಾರಾಟ ಮಾಡುವುದಕ್ಕೆ ಬಹಳ ಕಷ್ಟವಾಗುತ್ತದೆ. ರೈತನಿಗೆ ಯೋಗ್ಯ ಬೆಲೆ ಸಿಕ್ಕುವುದಿಲ್ಲ. ಆಹಾರಧಾನ್ಯಗಳನ್ನು ಮಾರಾಟ ಮಾಡುವ ಮಧ್ಯಸ್ಥಗಾರನಿಗೆ ಹೆಚ್ಚು ಲಾಭವಾಗುತ್ತದೆ. ಆದುದರಿಂದ ರೈತನಿಗೆ ತಾನು ಬೆಳೆದಂಥ ಆಹಾರಧಾನ್ಯಗಳಿಗೆ ಸರಿಯಾದ ಧಾರಣೆ ಸಿಕ್ಕುವವರಿಗೆ ದೇಶದಲ್ಲಿ ಆಹಾರ ಅಭಾವ ತಪ್ಪುವುದಿಲ್ಲ. ಇನ್ನು ರೈತನಿಗೆ ವ್ಯವಸಾಯಕ್ಕೆ ಅತ್ಯಗತ್ಯವಾಗಿ ಬೇಕಾಗುವ ಕುಳಿ, ಗಾದಿಯ ಪಟ್ಟಿ ಮುಂತಾದ ಉಪಕರಣಗಳು ಸಿಕ್ಕುವುದಿಲ್ಲ. ಈ ವಿಷಯವನ್ನು ಸರಕಾರ ಪರಿಶೀಲನೆ ಮಾಡಬೇಕು. ರೈತನಿಗೆ ಬೇಕಾಗತಕ್ಕ ಬೀಜ, ಗೊಬ್ಬರ ಇವುಗಳನ್ನು